# ವಿದ್ಯಾಮಾನ್ಯರ ಅನುಗ್ರಹ

ब्रह्मचर्यहरिप्रीति सुविद्यावादशालिनः ।
इष्टदान् कष्टहलतर्न्नः विद्यामान्यान्मुनीन्नुम : ॥

श्रीमध्वसिद्धांत समर्थनैकदीक्षं सदैव प्रवचोऽनुरक्तम् ।
विद्यातपःसिंधुमुदार विद्यामान्यं गुरूणां गुरुमानमामि ॥





ಬ್ರಹ್ಮಚರ್ಯಹರಿಪ್ರೀತಿ ಸುವಿದ್ಯಾವಾದಶಾಲಿನ: ।
ಇಷ್ಟದಾನ್ ಕಷ್ಟಹಲತರ್ನ್ನ: ವಿದ್ಯಾಮಾನ್ಯಾನ್ಮುನೀನ್ನುಮ : ॥

ಶ್ರೀಮಧ್ವಸಿದ್ಧಾಂತ ಸಮರ್ಥನೈಕದೀಕ್ಷಂ ಸದೈವ ಪ್ರವಚೋಽನುರಕ್ತಮ್।
ವಿದ್ಯಾತಪ:ಸಿಂಧುಮುದಾರ ವಿದ್ಯಾಮಾನ್ಯಂ ಗುರೂಣಾಂ ಗುರುಮಾನಮಾಮಿ ॥

## ವಿದ್ಯಾಮಾನ್ಯರಿಂದ ಅನುಗ್ರಹೀತನಾದ ಅಂತಿಮ ಭಾಗ್ಯಶಾಲಿ :

ಚಿ। ಅನಂತಮಾಧವಾಚಾರ್ಯ ಅವಧೂತ. ಇವನು ನನ್ನ ತಂದೆಯವರಾದ, ಮೈಸೂರಿನ ಮಹಾರಾಜಾ ಸಂಸ್ಕೃತ ಕಾಲೇಜಿನ "ತಂತ್ರಸಾರಾಗಮ ವಿಭಾಗ"ದಲ್ಲಿ ನಿವೃತ್ತ ಪ್ರಾಧ್ಯಾಪಕರಾಗಿದ್ದ, ಮಧ್ವಶಾಸ್ತ್ರ ಸಂಪನ್ನ ಶ್ರೀ ಎಸ್.ಎನ್. ರಾಮಚಂದ್ರಾಚಾರ್ಯರ ದೌಹಿತ್ರ. (ಇವರು ವಿದ್ಯಾಮಾನ್ಯತೀರ್ಥರಿಂದಲೇ "ಪಂಡಿತರತ್ನಂ" ಬಿರುದಾಂಕಿತರು) ಅಂದರೆ ನನ್ನ ಸೋದರ ಅಳಿಯ.

1999ರ ಡಿಸೆಂಬರ್ ಮಾಹೆಯಲ್ಲಿ ತುಮಕೂರು ಜಿಲ್ಲೆ ಶಿರಾ ಎಂಬ ಊರಿನಲ್ಲಿ ಒಂದು ಲಾರಿಯಿಂದ ಆಕಸ್ಮಿಕ ಅಪಘಾತವಾಗಿ ತಲೆಗೆ ಬಲವಾದ ಪೆಟ್ಟುಬಿದ್ದು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಸೇರಿದನು. ಆಗ ಆ ಮಗುವಿನ ವಯಸ್ಸು ಕೇವಲ ಮೂರು ವರ್ಷ ಮಾತ್ರ. 27 ದಿನಗಳ ನಿರಂತರ ಶುಶ್ರೂಷೆಯಾದರೂ ಕೂಡ ಮಗುವಿಗೆ ಜ್ಞಾನ ಬರಲೇ ಇಲ್ಲ. ವೈದ್ಯರು "ದೇವರೇ ದಿಕ್ಕು" ಎಂದರು. ಅದೇ ಸಮಯದಲ್ಲಿ ಪರಮಪೂಜ್ಯ ಶ್ರೀ ಪೇಜಾವರ ಮಠಾಧೀಶ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರೂ ಕೂಡ ಅಪಘಾತವಾಗಿ ಅದೇ ಆಸ್ಪತ್ರೆಯಲ್ಲಿ ಪಕ್ಕದ ವಾರ್ಡಿನಲ್ಲೇ ಇದ್ದರು. ಶ್ರೀಗಳು ತಮ್ಮ ನೋವನ್ನು ಮರೆತು ಜ್ಞಾನರಹಿತನಾಗಿದ್ದ ಮಗುವಿಗೆ ಮಂತ್ರಾಕ್ಷತೆಯಿತ್ತು ಅನುಗ್ರಹಿಸಿದ್ದರು.

ನಮ್ಮ ತಂದೆ ಶ್ರೀ ಎಸ್.ಎನ್. ರಾಮಚಂದ್ರಾಚಾರ್ಯರು ಉಡುಪಿಗೆ "ಮಧ್ವನವಮಿ" ನಿಮಿತ್ತ ತೆರಳಿ ಪರಮಪೂಜ್ಯ ಶ್ರೀ ಭಂಡಾರಕೇರಿ ಮಠಾಧೀಶರಾಗಿದ್ದ ಶ್ರೀ ೧೦೦೮ ವಿದ್ಯಾಮಾನ್ಯತೀರ್ಥರನ್ನು ಸಂಪರ್ಕಿಸಿ ತಮ್ಮ ಮೊಮ್ಮಗುವಿನ ಬಗ್ಗೆ ಹೇಳಿದಾಗ ಶ್ರೀಪಾದರು ಮಂತ್ರಾಕ್ಷತೆಯನ್ನು ತೆಗೆದುಕೊಂಡು ಜಪಿಸುತ್ತಾ ಶ್ರೀರಾಮಚಂದ್ರಾಚಾರ್ಯರಿಗೆ ನೀಡಿ ಅನುಗ್ರಹಿಸುತ್ತಾ "ಏನೂ ಯೋಚನೆ ಬೇಡ, ಈ ಮಂತ್ರಾಕ್ಷತೆಯನ್ನು ಆ ಮಗುವಿನ ತಲೆಯಲ್ಲಿ ಹಾಕಿ, "ಉಡುಪಿ ಕೃಷ್ಣ ಕಾಪಾಡುತ್ತಾನೆ" ಎಂದರು. ಅದರಂತೆ ಅನುಗ್ರಹೀತರಾದ ನಮ್ಮ ತಂದೆಗಳು ಬೆಂಗಳೂರಿಗೆ ಬಂದು ಮಂತ್ರಾಕ್ಷತೆಯನ್ನು ಚಿ। ಅನಂತಮಾಧವನ ತಲೆಯ ಮೇಲೆ ಹಾಕಿದರು.

ಆಶ್ಚರ್ಯವೆಂದರೆ, ಅಲ್ಲಿಯವರೆಗೆ ಸುಮಾರು 40 ದಿನಗಳಾದರೂ ಜ್ಞಾನವಿರದ, ಆಸ್ಪತ್ರೆಯ ನುರಿತ ವೈದ್ಯರಿಗೆಲ್ಲಾ ತಮ್ಮ ವೈದ್ಯವೃತ್ತಿಯಲ್ಲೇ ಸವಾಲಾಗಿದ್ದ, ಆ ಮಗುವಿನ ಬಗ್ಗೆ ಬದುಕುಳಿಯುವ ಅನುಮಾನ ವ್ಯಕ್ತಿಪಡಿಸಿದ್ದ, ವೈದ್ಯರೆಲ್ಲ ಅಚ್ಚರಿಗೊಂಡಂತೆ ಆ ಮಗು ಮಂತ್ರಾಕ್ಷತೆ ತಲೆಯ ಮೇಲೆ ಬಿದ್ದ ಮಾರನೇ ದಿನವೇ ಸ್ವಲ್ಪ ಜ್ಞಾನ ಬಂದು, ಮುಂದಿನ ಒಂದು ಹದಿನೈದು ದಿನಗಳಲ್ಲೇ, ಸ್ವಲ್ಪ ಸ್ವಲ್ಪವೇ ಬೆಳವಣಿಗೆ ಕಂಡು ಬಂದು, ಪೂರ್ಣ ಗುಣಮುಖನಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿ, ಈಗ ಬೆಂಗಳೂರಿನಲ್ಲಿ SSLC ಓದುತ್ತಿದ್ದಾನೆ. ಶ್ರೀಗಳ ಮಂತ್ರಾಕ್ಷತೆ ಎಷ್ಟು ಫಲಪ್ರದವೆಂದು ನಾವು ಕಣ್ಣಾರೆ ಕಂಡ ದೃಶ್ಯವಿದು.





ಮಾ।ಶಾ।ಸಂ ವಿದ್ವಾನ್ ಶ್ರೀ ರಾಮಚಂದ್ರಾಚಾರ್ಯರು

ವಿದ್ಯಾಮಾನ್ಯತೀರ್ಥರಿಂದ ಅನುಗ್ರಹೀತನಾದ
ಅನಂತಮಾಧವಾಚಾರ್ಯ ಅವಧೂತ

ಈರೀತಿಯಲ್ಲಿ ಶ್ರೀಪಾದರ ಅನುಗ್ರಹದಿಂದ ಸಮಸ್ಯೆ ಪರಿಹರಿಸಿಕೊಂಡವರಲ್ಲಿ ಪ್ರಾಯ: ಆ ಅನಂತಮಾಧವನೇ ಅಂತಿಮ ಭಾಗ್ಯಶಾಲಿ. ಆದರೆ ಬಾಲಕನು ಚೇತರಿಸಿಕೊಂಡು ತನ್ನ ಮರು ಜೀವ ನೀಡಿದ ಶ್ರೀ ವಿದ್ಯಾಮಾನ್ಯರನ್ನು ಮತ್ತೆ ಪ್ರತ್ಯಕ್ಷ ನೋಡಿ ಅವರ ಆಶೀರ್ವಾದಗಳನ್ನು ಪಡೆಯುವ ಅವನ ಮತ್ತು ಅವರ ಮಾತಾಪಿತೃಗಳಾದ ಶ್ರೀಮತಿ ಸುಧಾ ಮತು ಶ್ರೀ ರಘುನಾಥಾಚಾರ್ಯ ಅವಧೂತ ದಂಪತಿಗಳ ಆಸೆ ನೆರವೇರಲಿಲ್ಲ. ಏಕೆಂದರೆ ಗುರುಗಳು ವೈಶಾಖ ಶುದ್ದ ಏಕಾದಶಿ 14.5.2000ರಂದು ಹರಿಪಾದವನ್ನು ಸೇರಿದ್ದರು.

ಲೇಖನ – ನರಹರಿಸುಮಧ್ವ

9916904341